# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 672 |
| ಉತ್ತರಿಸುವ ದಿನಾಂಕ | 12-03-2025 |
| ಮಾನ್ಯ ಸದಸ್ಯರ ಹೆಸರು | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಪ್ರತಿ ದಿನ ಎಷ್ಟು ಆಸ್ತಿಗಳನ್ನು ನೋಂದಣಿ ಮಾಡಲಾಗುತ್ತಿದೆ; | 2023-24ನೇ ಸಾಲಿನಲ್ಲಿ ಕಾವೇರಿ-2.0 ತಂತ್ರಾಂಶದಲ್ಲಿ ಪ್ರತಿದಿನ ಸರಾಸರಿ ಅಂದಾಜು 9,171 ದಸ್ತಾವೇಜುಗಳು ನೋಂದಣಿ ಆಗಿರುತ್ತವೆ.<br><br>2024-25ನೇ ಸಾಲಿನಲ್ಲಿ ಕಾವೇರಿ-2.0 ತಂತ್ರಾಂಶದಲ್ಲಿ ಪ್ರತಿದಿನ ಸರಾಸರಿ ಅಂದಾಜು 8,285 ದಸ್ತಾವೇಜುಗಳು ನೋಂದಣಿ ಆಗಿರುತ್ತವೆ. |
| ಆ) | ಈ ಸಬ್ ರಿಜಿಸ್ಟ್ರಾರ್ ಕಛೇರಿಗಳಲ್ಲಿ ಸರ್ವರ್ ಸಮಸ್ಯೆಯಿಂದ ಆಸ್ತಿ ನೋಂದಣಿ ಪ್ರಕ್ರಿಯೆ ವಿಳಂಬವಾಗುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | Distributed Denial of Service (DDoS) Attack ನಿಂದಾಗಿ ದಿನಾಂಕ:30-01-2025 ರಿಂದ 04-02-2025 ರವರೆಗೆ ಕಾವೇರಿ-2.0 ತಂತ್ರಾಂಶದ ಸರ್ವರ್‌ನಲ್ಲಿ ಸಮಸ್ಯೆ ಉಂಟಾಗಿ ಸಾರ್ವಜನಿಕರಿಗೆ ದಸ್ತಾವೇಜುಗಳ ನೋಂದಣಿಯಲ್ಲಿ ತೊಂದರೆಯಾಗಿರುವುದು ಗಮನಕ್ಕೆ ಬಂದಿರುತ್ತದೆ. |
| ಇ) | ಕಾವೇರಿ 2.0 ತಂತ್ರಾಂಶ ಬರುವುದಕ್ಕೂ ಮೊದಲು ಎಷ್ಟು ಆಸ್ತಿಗಳನ್ನು ಪ್ರತಿ ದಿನ ನೋಂದಣಿ ಮಾಡಲಾಗುತ್ತಿತ್ತು; ಈ ತಂತ್ರಾಂಶ ಬಳಸಲು ಪ್ರಾರಂಭಿಸಿದ ನಂತರ ಎಷ್ಟು ಆಸ್ತಿಗಳನ್ನು ಪ್ರತಿ ದಿನ ನೋಂದಣಿ ಮಾಡಲಾಗುತ್ತಿದೆ; | ಕಾವೇರಿ-2.0 ತಂತ್ರಾಂಶ ಬರುವುದಕ್ಕೂ ಮೊದಲು ಅಂದರೆ ಕಾವೇರಿ-1.0 ತಂತ್ರಾಂಶದಲ್ಲಿ ರಾಜ್ಯದ ಉಪ ನೋಂದಣಿ ಕಛೇರಿಗಳಲ್ಲಿ ಪ್ರತಿದಿನ 2022-23ನೇ ಸಾಲಿನಲ್ಲಿ ಸರಾಸರಿ ಅಂದಾಜು 9,122 ದಸ್ತಾವೇಜುಗಳು ನೋಂದಣಿಯಾಗಿರುತ್ತದೆ.<br><br>ಕಾವೇರಿ-2.0 ತಂತ್ರಾಂಶವನ್ನು ಬಳಸಲು ಪ್ರಾರಂಭಿಸಿದ ನಂತರ ರಾಜ್ಯದ ಉಪ ನೋಂದಣಿ ಕಛೇರಿಗಳಲ್ಲಿ ಪ್ರತಿದಿನ 2023-24ನೇ ಸಾಲಿನಲ್ಲಿ ಸರಾಸರಿ ಅಂದಾಜು 9,171 ದಸ್ತಾವೇಜುಗಳು ನೋಂದಣಿಯಾಗಿರುತ್ತದೆ.<br><br>ಕಾವೇರಿ-2.0 ತಂತ್ರಾಂಶದಲ್ಲಿ ರಾಜ್ಯದಲ್ಲಿ ಉಪ ನೋಂದಣಿ ಕಛೇರಿಗಳಲ್ಲಿ ಪ್ರತಿದಿನ 2024-25ನೇ ಸಾಲಿನಲ್ಲಿ ಸರಾಸರಿ ಅಂದಾಜು 8,285 ದಸ್ತಾವೇಜುಗಳು ನೋಂದಣಿಯಾಗಿರುತ್ತದೆ. |

| | | |
|---|---|---|
| ಈ) | ಕಾವೇರಿ 2.0 ತಂತ್ರಾಂಶದಲ್ಲಿ ಕಾಣಿಸಿಕೊಳ್ಳುತ್ತಿರುವ ತಾಂತ್ರಿಕ ಸಮಸ್ಯೆಗೆ ಕಾರಣವೇನು; ಹಾಗೂ ಸರ್ವರ್ ಸಮಸ್ಯೆ ಸರಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಜನವರಿ ಅಂತ್ಯದಲ್ಲಿ ಹಾಗೂ ಫೆಬ್ರುವರಿ ಮೊದಲ ವಾರದಲ್ಲಿ Distributed Denial of Service (DDoS) Attack ನಿಂದಾಗಿ ಕಾವೇರಿ-2.0 ತಂತ್ರಾಂಶದಲ್ಲಿ ದಸ್ತಾವೇಜು ನೋಂದಣಿಯಲ್ಲಿ ಎದುರಾಗಿದ್ದ ಸಮಸ್ಯೆಯನ್ನು ಪರಿಹರಿಸಲಾಗಿದ್ದು, ಸಿಎಸ್‌ಜಿ ಯು ಕಾಲ-ಕಾಲಕ್ಕೆ ತಂತ್ರಾಂಶವನ್ನು ಉನ್ನತೀಕರಿಸುತ್ತಿದ್ದು, ಪ್ರಸ್ತುತ ಯಾವುದೇ ಸಮಸ್ಯೆ ಇರುವುದಿಲ್ಲ.<br><br>ಕಾವೇರಿ-2.0 ತಂತ್ರಾಂಶವು ನೂತನ ತಂತ್ರಾಂಶವಾಗಿದ್ದು, ಇದನ್ನು ಜೂನ್-2023 ರ ಅಂತ್ಯಕ್ಕೆ ರಾಜ್ಯದ ಎಲ್ಲಾ ಉಪನೋಂದಣಿ ಕಛೇರಿಗಳಲ್ಲಿ ಅಳವಡಿಸಲಾಗಿರುತ್ತದೆ. ಈ ತಂತ್ರಾಂಶದಲ್ಲಿ Public Interface ಇರುವುದರಿಂದ ಸಾರ್ವಜನಿಕರು ಆನ್‌ಲೈನ್ ಮುಖಾಂತರ ದಸ್ತಾವೇಜಿನ ನೋಂದಣಿಗೆ ಸಂಬಂಧಿಸಿದ ಶೇ.90ರಷ್ಟು ಕೆಲಸವನ್ನು ಪೂರ್ಣಗೊಳಿಸಿರುತ್ತಾರೆ. ತಂತ್ರಾಂಶದ ಕಾರ್ಯಾಚರಣೆಯಲ್ಲಿ ಸಾರ್ವಜನಿಕರ ಪಾತ್ರ ಹೆಚ್ಚಾಗಿರುವುದರಿಂದ ಪ್ರಾರಂಭದ ದಿನಗಳಲ್ಲಿ ತಂತ್ರಾಂಶವನ್ನು ಉಪಯೋಗಿಸುವಲ್ಲಿ ಸಾರ್ವಜನಿಕರಿಗೆ ಕೆಲವು ಸಮಸ್ಯೆಗಳು ಕಂಡು ಬಂದಿದ್ದು, ಅವುಗಳನ್ನು ಕಾಲಕ್ರಮೇಣ ಪರಿಹರಿಸಲಾಗಿರುತ್ತದೆ.<br><br>ತಂತ್ರಾಂಶದ ಬಳಕೆಯಲ್ಲಿ ಸಾರ್ವಜನಿಕರು ಎದುರಿಸುವ ಸಮಸ್ಯೆ ಹಾಗೂ ಗೊಂದಲಗಳಿಗೆ ತಕ್ಷಣ ಪರಿಹಾರ ಒದಗಿಸಲು ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br><br>**1. ಸಹಾಯವಾಣಿ:** ನೂತನ ತಂತ್ರಾಂಶದಲ್ಲಿ Public Interface ಇರುವುದರಿಂದ ಸಾರ್ವಜನಿಕರು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಎದುರಿಸುವ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಪರಿಹರಿಸಲು ಸಕಾಲ ಕರೆ ಕೇಂದ್ರದ ಸಹಯೋಗದೊಂದಿಗೆ ಇಲಾಖೆಯ ಸಹಾಯವಾಣಿಯನ್ನು (080-68265316) ಪ್ರಾರಂಭಿಸಲಾಗಿರುತ್ತದೆ. |

| | | |
|---|---|---|
| | | **2. ಟಿಕೇಟಿಂಗ್ ಟೂಲ್:** ಉಪನೋಂದಣಿ ಕಛೇರಿಯಲ್ಲಿನ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಟಿಕೇಟಿಂಗ್ ಟೂಲ್ ಒದಗಿಸಲಾಗಿದ್ದು, ತಂತ್ರಾಂಶದಲ್ಲಿ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಸದರಿ ಟೂಲ್ ಮುಖಾಂತರ ಆನ್‌ಲೈನ್ ನಲ್ಲಿ ತಾಂತ್ರಿಕ ತಂಡಕ್ಕೆ ತಿಳಿಸಬಹುದಾಗಿದೆ.<br><br>**3. ಸರ್ವೀಸ್ ಡೆಸ್ಕ್:** ಉಪನೋಂದಣಿ ಕಛೇರಿಗಳಲ್ಲಿ ನೋಂದಣಿ ಸಮಯದಲ್ಲಿ ಎದುರಾಗುವ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಪರಿಹರಿಸಲು ಕೇಂದ್ರ ಕಛೇರಿಯಲ್ಲಿ 08 ತಾಂತ್ರಿಕ ಸಿಬ್ಬಂದಿಗಳನ್ನೊಳಗೊಂಡ ಸರ್ವೀಸ್ ಡೆಸ್ಕ್ ಸ್ಥಾಪಿಸಲಾಗಿರುತ್ತದೆ.<br><br>**4. ಅಪ್ಲೀಕೇಷನ್ ಸಪೋರ್ಟ್ ಇಂಜಿನಿಯರ್ ಹಾಗೂ ಸಿಸ್ಟಂ ಅಡ್ಮಿನ್:** ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಿಸ್ಟಂ ಅಡ್ಮಿನ್ ಹಾಗೂ ಅಪ್ಲೀಕೇಷನ್ ಸಪೋರ್ಟ್ ಇಂಜಿನಿಯರ್‌ಗಳನ್ನು ನೇಮಿಸಲಾಗಿರುತ್ತದೆ. ಹಾರ್ಡವೇರ್‌ನಲ್ಲಿನ ಸಮಸ್ಯೆಗಳನ್ನು ನಿರ್ವಹಿಸಲು ಸಿಸ್ಟಂ ಅಡ್ಮಿನ್‌ಗಳು ಹಾಗೂ ತಂತ್ರಾಂಶದಲ್ಲಿನ ಸಮಸ್ಯೆಗಳನ್ನು ನಿರ್ವಹಿಸಲು ಅಪ್ಲೀಕೇಷನ್ ಸಪೋರ್ಟ್ ಇಂಜಿನಿಯರ್‌ಗಳು ಸಹಕರಿಸುತ್ತಿರುತ್ತಾರೆ.<br><br>**5. ಕಾವೇರಿ ಯೋಜನಾ ಉಸ್ತುವಾರಿ ಘಟಕ (KPUM):** ಕೇಂದ್ರ ಕಛೇರಿಯಲ್ಲಿ 05 ತಾಂತ್ರಿಕ ಸದಸ್ಯರನೊಳಗೊಂಡ ಕಾವೇರಿ ಯೋಜನಾ ಉಸ್ತುವಾರಿ ಘಟಕವನ್ನು ಸ್ಥಾಪಿಸಲಾಗಿರುತ್ತದೆ. ಈ ತಂಡವು ತಂತ್ರಾಂಶದ ಅಭಿವೃದ್ಧಿ, ನಿರ್ವಹಣೆ ಮತ್ತು ಕಾರ್ಯಾಚರಣೆಯಲ್ಲಿ ಸೆಂಟರ್ ಫಾರ್ ಸ್ಮಾರ್ಟ್ ಗೌರನೆನ್ಸ್ ಸಂಸ್ಥೆಗೆ ಅಗತ್ಯ ತಾಂತ್ರಿಕ ಮಾಹಿತಿ ಒದಗಿಸುತ್ತಿದೆ.<br><br>**6. ಸಿಎಸ್‌ಜಿಯಲ್ಲಿನ L2 Support ವ್ಯವಸ್ಥೆ:** ತಂತ್ರಾಂಶದ ಅಭಿವೃದ್ಧಿಗಾರರಾದ ಸಿಎಸ್‌ಜಿ ಸಂಸ್ಥೆಯು ತಾಂತ್ರಿಕ ಸಮಸ್ಯೆಗಳ ಪರಿಹಾರಕ್ಕಾಗಿ 04 ತಾಂತ್ರಿಕ ಸಿಬ್ಬಂದಿಗಳ L2 Support ವ್ಯವಸ್ಥೆ ಒದಗಿಸಿರುತ್ತದೆ. |

| | | |
|---|---|---|
| | | **7. ಯುಟ್ಯೂಬ್ ಚಾನಲ್:** ಕಾವೇರಿ ತಂತ್ರಾಂಶದಲ್ಲಿ ವಿವಿಧ ಸೇವೆಗಳನ್ನು ಪಡೆಯಲು ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿಡಿಯೋ ಟುಟೋರಿಯಲ್‌ಗಳನ್ನು ಸಿದ್ಧಪಡಿಸಿ ಇಲಾಖೆಯ ಯುಟ್ಯೂಬ್ ಚಾನಲ್ ನಲ್ಲಿ ಒದಗಿಸಲಾಗಿರುತ್ತದೆ.<br><br>**8. ಪೋಸ್ಟರ್:** ಕಾವೇರಿ-2 ತಂತ್ರಾಂಶದ ಬಗ್ಗೆ ಮಾಹಿತಿಯನ್ನು ನೀಡಲು ರಾಜ್ಯದ ಎಲ್ಲಾ ನೋಂದಣಿ ಕಛೇರಿಗಳಲ್ಲಿ ಪ್ರದರ್ಶಿಸಲಾಗಿರುತ್ತದೆ.<br><br>**9.ತರಬೇತಿ:** i) ಅಧಿಕಾರಿ / ಸಿಬ್ಬಂದಿ : ಇಲಾಖೆಯ ಎಲ್ಲಾ ಅಧಿಕಾರಿ /ಸಿಬ್ಬಂದಿಗಳಿಗೆ ಕೇಂದ್ರ ಕಛೇರಿಯ ಗಣಕೀಕರಣ ತರಬೇತಿ ಕೋಶದಲ್ಲಿ ಕಾವೇರಿ-2.0 ತಂತ್ರಾಂಶದ ತರಬೇತಿ ನೀಡಲಾಗಿರುತ್ತದೆ.<br>ii) ಸಾರ್ವಜನಿಕರು /ದಸ್ತಾವೇಜು ಬರಹಗಾರರು/ ವಕೀಲರು: ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಯಾಗಾರಗಳನ್ನು ನಡೆಸಿ ತಂತ್ರಾಂಶದ ಬಳಕೆ ಹಾಗೂ ತಂತ್ರಾಂಶದ ಮೂಲಕ ಸೇವೆಗಳನ್ನು ಪಡೆಯುವ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ. |

ಕಂಇ/78/ಎಂಎನ್‌ಎಸ್‌ಎ/2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು